ದಿನಾ ಒಂದೇ ಹಕ್ಕಿ, ಅದಕ್ಕೊಂದು ಕುಟುಂಬ, ಅಶೋಕ ಹೋಟೆಲ್ ಬಳಿಗೆ ಅದಕ್ಕೆ ಡ್ರಾಪ್ – ಇವೆಲ್ಲ ನೀವು ಕಿಸೆಯಿಂದ ಹಾಕಿದ್ದು ಅಂದಳಾಕೆ. ರಮಾ ಹಾಗಂದ ಮೇಲೆ ಬೇರೆ ಯಾರಲ್ಲೂ ಈ ಸುದ್ದಿ ಹೇಳುವ ಧೈರ್ಯ ಬರಲಿಲ್ಲ. ಸುಮ್ಮನಿದ್ದೆ.

ಈ ಹಕ್ಕಿ ಬೆಳಗ್ಗೆ ಬರುವುದೆಲ್ಲಿಂದ? ಪತ್ತೆ ಹಚ್ಚಬೇಕೆನಿಸಿತ್ತು. ಅದಕ್ಕೆ ಸಮಯವೂ ಕೂಡಿ ಬಂತು. ಶುಕ್ರವಾರ, ''ನನಗೆ ಲೇಟಾಯ್ತು ಸ್ಕೂಲಿಗೆ ಬಿಟ್ಟು ಬನ್ನಿ ಪ್ಲೀಸ್'' ಅಂದಳು ರಮಾ. ಹೋಗ್ತಾ ಬರ್ತಾ ಒಟ್ಟು ಮೂರು ಕಿ.ಮೀ. ದಾರಿ. ಆಕೆಯನ್ನು ಬಿಟ್ಟು ಬರುವಾಗ ಬೇರೆ ರಸ್ತೆ ಬಳಸಿ ಬಂದು ನಮ್ಮ ಕಾಲನಿಗೆ ಎರಡು ಮೂರು ಸುತ್ತು ಹಾಕಿದೆ. ಮನೆಯ ಹಿಂದಿನ ರಸ್ತೆಯ ಮೂಲೆಯ ದೊಡ್ಡ ಸೈಟಿನಲ್ಲಿ ಬೂರುಗದ ಮರವೊಂದನ್ನೂ ಅದರಲ್ಲಿ ಇದೇ ಜಾತಿಯ ಕೆಲವು ಹಕ್ಕಿಗಳನ್ನೂ ನೋಡಿದೆ. ನಮ್ಮ ಹಕ್ಕಿಯೂ ಅಲ್ಲಿ ಇದ್ದಿರಬಹುದೇ ಎಂಬ ಕುತೂಹಲ ಮೂಡಿತು. ಕಾರನ್ನು ಇನ್ನೂ ಸ್ವಲ್ಪ ಹತ್ತಿರ ಕೊಂಡು ಹೋಗಿ, ಪಾರ್ಕ್ ಮಾಡಿ ಸುತ್ತ ಮುತ್ತೆಲ್ಲ ನೋಡಿದೆ. ಆಚೀಚೆ ಹೋಗುವ ಒಂದಿಬ್ಬರು ನನ್ನನ್ನು ಪ್ರಶ್ನಾರ್ಥಕವಾಗಿ ನೋಡಿದರು. ''ನಾಯಿ ಹುಡುಕುತ್ತಿದ್ದೀರಾ ಸಾರ್? ಓ ಅಲ್ಲಿ ಒಂದನ್ನು ನೋಡಿದೆ'' ಅಂತ ಒಬ್ಬರು ನನ್ನ ಸಮಸ್ಯೆಯನ್ನು ಊಹಿಸಿ, ಪರಿಹಾರಕ್ಕೂ ಶ್ರಮಿಸಿದರು. ಇನ್ನೂ ನಿಂತರೆ ಸಂಶಯಸ್ಥರು ಜಾಸ್ತಿಯಾಗುತ್ತಾರೆ ಮತ್ತೆ ಆಫೀಸಿಗೂ ಲೇಟಾಗುತ್ತದೆ ಎಂದು ಅರಿವಾಗಿ ಹಕ್ಕಿಗೊಡವೆ ಬಿಟ್ಟು ವಾಪಸ್ಸು ಮನೆಗೆ ಬಂದೆ. ಇಲ್ಲಿಯೂ ಬೂರುಗದ ಮರವಿದೆ, ಅಶೋಕ ಹೋಟೆಲಿನ ಹಿಂದೆಯೂ ಒಂದು ಬೂರುಗದ ಮರವಿದೆ ಎನ್ನುವುದನ್ನು ಬಿಟ್ಟು ಹಕ್ಕಿಯ ಬಗ್ಗೆ ಹೆಚ್ಚಿಗೆ ಬೇರೇನೂ ನನ್ನ ಗಮನಕ್ಕೆ ಬಂದಿರಲಿಲ್ಲ. ಯಥಾಪ್ರಕಾರ ನಾನು ಆಫೀಸಿಗೆ ಹೊರಡುವಾಗ ಹಕ್ಕಿ ಬಾನೆಟ್ ಮೇಲೆ ಬಂದು ಕೂತಿತ್ತು. ನಾನು ಅದರ ಬಗ್ಗೆ ತನಿಖೆಗೆ ಮುಂದಾದ ವಿಚಾರ ಅದಕ್ಕೆ ತಿಳಿದಿದೆಯೇ? ಅದರ ಹಾವಭಾವದಲ್ಲಿ ಹಾಗೆ ಏನೂ ಗೊತ್ತಾಗುತ್ತಿರಲಿಲ್ಲ.

ಶನಿವಾರ ಬಂತು. ನನಗೆ ಕುತೂಹಲ. ನನ್ನ ಕೋ ಪ್ಯಾಸೆಂಜರ್ ಹಕ್ಕಿ ಇವತ್ತೇನು ಮಾಡುತ್ತದೆ? ನನ್ನಂತೆಯೇ ಅದಕ್ಕೂ ಫೈವ್ ಡೇ ವೀಕಾ? ಒಂಬತ್ತು ಗಂಟೆಯಾದ ಕೂಡಲೇ ಮೆಲ್ಲನೆ ಕೆಳಗಿಳಿದು ಕಾರಿನ ಬಳಿ ಬಂದೆ. ಹಕ್ಕಿ ಬಂದಿದ್ದರೆ ಅಶೋಕ ಹೋಟೆಲ್ ವರೆಗೆ ಹೋಗಿ ಅಡ್ಡ ರಸ್ತೆಗೇ ಕಾರು ತಿರುಗಿಸಿ ಅದರ ಮುಂದಿನ ಪಯಣ ಏನು ಎಂದು ತಿಳಿದುಕೊಳ್ಳೋಣ ಎನ್ನುತ್ತಿತ್ತು ಮನಸ್ಸು. ''ಚೆನ್ನಾಗಿದ್ದೀರಾ ಸಾರ್'' ಎನ್ನುತ್ತ ಎದುರಿನ ಬಿಲ್ಡಿಂಗಿನಲ್ಲಿ ವಾಸಿಸುತ್ತಿದ್ದ ಪರಿಚಯಸ್ಥರೊಬ್ಬರು ಮಾತಿಗಿಳಿದರು. ಅವರಲ್ಲಿ ಅದೂ ಇದೂ ಲೋಕಾಭಿರಾಮ ಮಾತಾಡುತ್ತಿದ್ದರೂ ನನ್ನ ಗಮನವೆಲ್ಲ ಮರಗಳ ಮೇಲೆ. ಹಕ್ಕಿ ಎಲ್ಲೂ ಕಾಣಿಸಲಿಲ್ಲ. ನಾನು ಮೇಲೆ ನೋಡುತ್ತಿದ್ದುದನ್ನು ಗಮನಿಸಿದ ಅವರು, ''ಈಗೇನೂ ಮೋಡ ಇಲ್ಲ, ಆದರೆ ಸಂಜೆ ಮಳೆ ಬಿದ್ದೇ ಬೀಳುತ್ತೆ'' ಅಂದರು. ಆತ ಪುನಃ ಮತ್ತೊಂದು ರೌಂಡ್ ಮಾತುಕತೆಗೆ ತೊಡಗುತ್ತಿದ್ದಂತೆ, ''ಅದೇ... ಮಳೆಗೆ ಕಾರು ಒರಸಿದರೂ ಪ್ರಯೋಜನ ಇಲ್ಲ. ನಾಳೆ ಒರೆಸಿದರಾಯ್ತು'' ಎನ್ನುತ್ತ ನಕ್ಕು ವಾಪಸ್ ಮನೆಗೆ ಬಂದೆ.

''ಓಹೋ ಹಕ್ಕಿಯನ್ನ ಅಶೋಕ ಹೋಟೆಲಿಗೆ ಬಿಟ್ಟು ಬರಲು ಹೋಗಿದ್ರಾ?'' ಅನ್ನುತ್ತ ಅಣಕಿಸಿದಳು ರಮಾ. ''ಬಾಲ್ಕನಿಗೇ ಕಾಫಿ ತರುತ್ತೇನೆ, ಹಕ್ಕಿ ಶನಿವಾರ ಭಾನುವಾರ ಏನು ಮಾಡುತ್ತದೆ ಎಂದು ನಿಖರವಾಗಿ ತಿಳಿಯುವ ವರೆಗೆ ಅಲ್ಲಿಯೇ ಕುಳಿತುಕೊಳ್ಳಿ. ನಿಮ್ಮ ಅಮ್ಮನಿಗೂ ಅದರ ವಿವರವಾದ ಪ್ರಯಾಣ ಕಥೆ ಹೇಳಿ'' ಎಂದವಳು, ''ಮಗ ಹೇಳುವುದನ್ನು ಪೂರ್ತಿ ನಂಬುವವರೊಬ್ಬರಿದ್ದಾರಲ್ಲ'' ಎಂದು ಬೇರೆ ಕೊಂಕು ಸೇರಿಸಿದಳು. ರಮಾಳಿಗೆ ನನ್ನನ್ನು ಅಣಕಿಸುವ ಹೊಸ ಅಸ್ತ್ರವಾಗಿ ಹಕ್ಕಿ ಕೈಗೆ ಸಿಕ್ಕಿತ್ತು. ತೆಪ್ಪಗೆ ಒಳಗೆ ಬಂದೆ. ಮತ್ತಿನ್ನೇನೋ ಹೇಳ ಹೊರಟ ರಮಾಳನ್ನು ತಡೆದು, ''ಊರವರಿಗೆಲ್ಲ ಹೇಳಿ ನನ್ನನ್ನು ಮಾತ್ರ ಬಿಟ್ಟುಬಿಟ್ರಲ್ಲ ಅಂತ ನೀನು ಹೇಳಬಾರದು ಎನ್ನುವ ಏಕಮಾತ್ರ ಕಾರಣಕ್ಕೆ ನಿನಗೆ ಈ ವಿವರ ಹೇಳಿದ್ದು. ನಂಬು ಅಂತ ನಾನೆಲ್ಲಿ ಹೇಳಿದೆ?'' ಅಂದೆ. ಅಷ್ಟಕ್ಕೇ ಅಪಾಯ ಅರಿತ